ಇ) ಹಾಗಿದ್ದಲ್ಲಿ ಕೊರತೆಯಿರುವುದನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ತೋಟಗಾರಿಕೆ ಸಚಿವರು) :

ಅ. ತೋಟಗಾರಿಕೆ ಬೆಳೆಗಳನ್ನು ಸಂರಕ್ಷಿಸಲು ಸರ್ಕಾರವು ಸಹಕಾರ ಸಂಘಗಳು, ಖಾಸಗಿಯವರು ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ 54 ಶೀತಲಗೃಹಗಳ ವ್ಯವಸ್ಥೆಯನ್ನು ಮಾಡಿದೆ. ಅವುಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರು(ನ) –17, ತುಮಕೂರು–2,
ಬೆಂಗಳೂರು(ಗ್ರಾ–1, ಬಿಜಾಪುರ–5
ಕೋಲಾರ–8, ಬೆಳಗಾಂ–7,
ಹಾಸನ–3, ಬಾಗಲಕೋಟೆ–1
ಧಾರವಾಡ–3, ಬಳ್ಳಾರಿ–3
ಹಾವೇರಿ–4, **ಒಟ್ಟು–54**

ಆ. ಹೌದು.

ಇ. ಶೀತಲಗೃಹಗಳನ್ನು ಸ್ಥಾಪಿಸಲು ಸಹಕಾರ ಸಂಘಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಖಾಸಗಿಯವರಿಗೆ ಹಣಕಾಸಿನ ನೆರವು, ಶೀತಲಗೃಹಗಳು ಬಳಸುವ ವಿದ್ಯುತ್‌ದರದ ಮೇಲೆ ಸಹಾಯಧನ, ಶೀತಲಗೃಹ ನಿರ್ಮಾಣಕ್ಕೆ ಸ್ಥಳವಕಾಶ ಕಲ್ಪಿಸುವುದು, ಇತ್ಯಾದಿ ಪ್ರೋತ್ಸಾಹಗಳನ್ನು ನೀಡಿ ಕೊರತೆಯನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

125 (260) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಕೃಷಿ ಮಾರುಕಟ್ಟೆ ಸಚಿವರು)ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿ ವರ್ಷ ಟೊಮೆಟೋ ಬೆಳೆಯ ಬೆಲೆಯು ಕುಸಿದು ರಸ್ತೆಗೆ ರೈತರು ಬೆಲ್ಲಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಸದರಿ ಬೆಳೆಯ ಬೆಲೆಯು ಕುಸಿದಾಗ ಅದಕ್ಕೆ ಬೆಂಬಲ ಬೆಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ. ಹೌದು

ಆ. ಟೊಮೆಟೋ ಬೆಲೆಯು ಕುಸಿದಾಗ, ರಾಜ್ಯ ಸರ್ಕಾರವು ಟೊಮೆಟೋಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸಿ ಕಳೆದ 2 ವರ್ಷಗಳಲ್ಲಿ ಆವರ್ತನಿಧಿಯಂದ ಹಣ ಬಿಡುಗಡೆ ಮಾಡಿ ಈ ಕೆಳಕಂಡಂತೆ ಖರೀದಿಸಿರುತ್ತದೆ.

ವರ್ಷ	ಆವರ್ತನಿಧಿಯಿಂದ ಟೊಮೆಟೋ ಖರೀದಿಗಾಗಿ ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ)	ಖರೀದಿಸಿದ ಪ್ರಮಾಣ ಪ್ರಮಾಣ ಕ್ವಿಂಟಾಲ್‌ಗಳಲ್ಲಿ	ಪ್ರಯೋಜನ ಪಡೆದ ಪಡೆದ ರೈತರ ಸಂಖ್ಯೆ
2004–05	10.00	54.34	652
2005–06	70.00		4312

ಸದ್ಯ ಟೊಮೆಟೋ ಬೆಲೆ ಕುಸಿದಿದ್ದು, ರೈತರ ಹಿತರಕ್ಷಣೆಯನ್ನು ಕಾಪಾಡಲು, ಕೋಲಾರ ಜಿಲ್ಲೆಯಲ್ಲಿ ಟೊಮೆಟೋ ಖರೀದಿಸಲು ಈಗಾಗಲೇ ಆವರ್ತನಿಧಿಯಿಂದ ರೂ 25.50 ಲಕ್ಷಗಳನ್ನು ಹಾಪ್‌ಕಾಮ್ಸ್, ಬೆಂಗಳೂರು ಇವರಿಗೆ ಹಾಗೂ ರೂ 5.00 ಲಕ್ಷಗಳನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಟೊಮೆಟೋ ಖರೀದಿಸಲು ಹಾಗೂ ರೂ 2.00 ಲಕ್ಷಗಳನ್ನು ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಚಾಮರಾಜನಗರ ಜಿಲೆಯಲ್ಲಿ ಟೊಮೆಟೋ ಖರೀದಿಸಲು ಬಿಡುಗಡೆ ಮಾಡಿದ್ದು ಖರೀದಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು.

126 (261) ವಾಟಾಳ್ ನಾಗರಾಜ್ (ಚಾಮರಾಜನಗರ) ಮೀನುಗಾರಿಕೆ ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ತೆಂಗು ಬೆಳೆಗೆ ನುಸಿ ಪೀಡೆ ರೋಗವು ಎಷ್ಟು ವರ್ಷದಿಂದ ಹರಡಿದೆ;

ಆ. ಸದರಿ ರೋಗದಿಂದ ಇಲ್ಲಿಯವರೆಗೆ ನಾಶವಾಗಿರುವ ತೆಂಗಿನ ಮರಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಇ. ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ. ರಾಜ್ಯದಲ್ಲಿ ತೆಂಗು ಬೆಳೆಗೆ ನುಸಿ ಪೀಡೆಯು ನವೆಂಬರ್ 1998 ರಿಂದ ಕಾಣಿಸಿಕೊಂಡಿದ್ದು ಸುಮಾರು 8 ವರ್ಷಗಳಿಂದ ಹರಡಿದೆ.

ಆ. ನುಸಿ ಪೀಡೆಯಿಂದ ಇಳುವರಿ ಮಾತ್ರ ಕಡಿಮೆಯಾಗಿರುತ್ತದೆ. ಈ ಕೀಟದ ಗುಣವೇನೆಂದರೆ ತುಂಬ ಎಳೆಕಾಯಿಗಳನ್ನು ಬಾದಿಸುತ್ತದೆ. ಆದರೆ ತೆಂಗಿನ ಮರವನ್ನು ಬಾದಿಸುವುದಿಲ್ಲ. ನುಸಿ ಹತೋಟಿಗಾಗಿ ತೆಂಗಿನ ತೋಟಗಳ ಪೋಷಣೆ, ರೋಗ ನಿರೋಧಕ ಶಕ್ತಿ ವೃದ್ದಿಸುವುದು ಹಾಗೂ ತೋಟಗಳ ಸ್ವಚ್ಚತೆ ಕಾಪಾಡಲು ಸಮಗ್ರ ಪರಿಸರ ಪೂರಕ ನಿರ್ವಹಣಾ ಕ್ರಮ ಹಾಗೂ ಪರಿಸರ ಪೂರಕ ಪೀಡೆ ನಾಶಕಗಳನ್ನು ಬಳಸಲು ರೈತರಿಗೆ ಸಲಹೆ ನಿಡಲಾಗುತ್ತಿದೆ. ಈ ಬಗ್ಗೆ ರೈತರಿಗೆ